doc-514
T-1-2

Reg No M 1299 - 42nd Year - Sri 'Satyavadi' Mysore - 16-1-1958

ಎಲ್ಲ ವಿಧದ ಆಯುರ್ವೇದ ಔಷಧಗಳಿಗೆ
ಅ ಶೋ ಕ ಫಾರ್ಮಸಿ
ಲ್ಯಾನ್ಸ್‌ಡೌನ್ ಬಜಾರ್, ಮೈಸೂರು

For Quality Printing
L. N. Press
Sivarampet, Mysore

ಸತ್ಯವಾದಿ

ಸ್ಥಾಪಕರು- ಲರುನೆ ಸಿಂಸ್ಕೇದಾರ್ ಎಂ. ವಿ ಸಬ್ಬರಾಯರು [ಬಿಡಿಪ್ರತಿ 3 ಪೈ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ
ಸತ್ಯವಾದಿ ವಾರಾಂತ್ಯ ಪತ್ರಿಕೆ
ವಾರ್ಷಿಕಚಂದಾ ಅಂಚೆವೆಚ್ಚಸೇರಿ 1-80

ಸಾರ್ವಜನಿಕ ಸಂತಪಿಗೋಸರ ಮಂತ್ರಿಗಳ ವಿಚಾರಣೆಯ ನಿರ್ಧಾರ

ಲ್ ರ

ಕಾಶ್ಮೀರ ಭಾರತದ್ದು

—

ಜೆಕ್ ಪ್ರಧಾನಿ ಅಭಿಪ್ರಾಯ

ಕಲ್ಕತ್ತಾ 15 — ರಾಜಭವನದಲ್ಲಿ ಪತ್ರಿಕಾ ಸಮ್ಮೇಳನದಲ್ಲಿ ಜೆಕೋಸ್ಲೋವಿಕಿಯಾ ಪ್ರಧಾನಿ ವಿಲಿಯಂ ಸಿಡೋಕಿ ಮಾತನಾಡುತ್ತಾ, ಕಾಶ್ಮೀರ ಭಾರತದ ಅಂತರ್ಗತ ಭಾಗ ಮತ್ತು ಆ ವಿಷಯದಲ್ಲಿ ಚರ್ಚೆ ಮಾಡುವ ವಿಷಯವೇ ಇಲ್ಲ ಎಂದರು ವಿಶ್ವಸಂಸ್ಥೆಯ ಕಾಶ್ಮೀರದ ಪ್ರತಿನಿಧಿ ಡಾ|| ಫ್ರಾಂಕ್ ಗ್ರಹಾಂ ರವರು ಕಾಶ್ಮೀರ ಸಮಸ್ಯೆಯನ್ನು ಪ್ರಜಾ ಸತ್ತಾತ್ಮಕವಾಗಿ ಕೈಹಚ್ಚಿದರೆ ಮತ್ತು ಕಾಶ್ಮೀರದ ಜನಾಭಿಪ್ರಾಯವನ್ನು ಅಭ್ಯಸಿಸಿದರೆ ಅದು ಎಲ್ಲಿಗೆ ಸೇರಬೇಕೆಂಬುದು ಅವರಿಗೆ ಅರ್ಥವಾಗುವುದು ಮತ್ತು ಪರಿಹರಿಸುವಂಥ ಸಮಸ್ಯೆ ಇಲ್ಲವೆಂದು ಅರ್ಥವಾಗುವುದು ಎಂದರು ಕಾಶ್ಮೀರ ಭಾರತದ ಒಂದು ಭಾಗ ಎಂದು ಅವರು ಒತ್ತಿ ಹೇಳಿ ತಮ್ಮ ಅಭಿಪ್ರಾಯ ವ್ಯಕ್ತ ಮಾಡಿದರು

—

× ಪಾಕಿಸ್ತಾನ ಪ್ರಧಾನಿ ಸೂನರ್ ಪೂರ್ವ ಪಾಕಿಸ್ತಾನದಲ್ಲಿರುವ ಹಿಂದೂಗಳನ್ನು ಹಿಡಿದು ನಿರ್ಬಂಧ ಶಿಬಿರಕ್ಕೆ ಸೇರಿಸಬೇಕೆಂದು ಅಲ್ಲಿಯ ಸರ್ಕಾರ ಇತ್ತೀಚಿನ ಆಜ್ಞೆಯನ್ನು ಇಡೀ ಭಾರತ ಪ್ರತಿಭಟನೆ ಮಾಡಬೇಕೆಂದೂ ಹಿಂದೂ ಮಹಾಸಭೆ ನಾಯಕ ಶ್ರೀ ಎಸ್ ಸಿ ಚಟರ್ಜಿ ನವ ದೆಹಲಿಯಲ್ಲಿ ತಿಳಿಸಿರುವರು

ಂ ಂ

× 44 ದೇಶಗಳ 9 ಸಹಸ್ರಕ್ಕೂ ಹೆಚ್ಚು ವಂದಿ ವಿಜ್ಞಾನಿಗಳು ಮೊನ್ನೆ ವಿಶ್ವ ಸಂಸ್ಥೆಗೆ ಅರ್ಜಿ ಕೊಟ್ಟು ಅಣು ಸ್ಫೋಟ ಗವನ್ನು ನಿಲ್ಲಿಸುವಂತೆ ಅಂತರರಾಷ್ಟ್ರ ಒಪ್ಪಂದವಾಗಬೇಕೆಂದು ಒತ್ತಾಯ ಮಾಡಿದರು

ಕೇರಳಕ್ಕೆ ಬನ್ನಿ

ಪಾಗ್ಯೋತಿಪುರ 15 — ಬರುವ ಏಪ್ರಿಲಿನಲ್ಲಿ ಪಂ|| ನೆಹರು ಕೇರಳಕ್ಕೆ ತೆರಳುವರು. ಕೇರಳದ ಮುಖ್ಯ ಮಂತ್ರಿ ಶ್ರೀ ನಂಬೂದರಿ ಪಾದ್‌ರ ಆಹ್ವಾನದಂತೆ ಈ ಭೇಟಿ.

ಪದಾರ್ಥಗಳ ರಫ್ತು ಅಗತ್ಯ

ಕಲ್ಕತ್ತಾ 14 — ಭಾರತದ ವಾಣಿಜ್ಯ ಮಂತ್ರಿ ಶ್ರೀ ಮುರಾರ್ಜಿ ದೇಸಾಯಿರವರು ಇಲ್ಲಿ ಹೇಳಿಕೆಯಿತ್ತು ಭಾರತವು ತನ್ನಲ್ಲಿ ಶಯಾರಾದ ಪದಾರ್ಥಗಳನ್ನು ಪರದೇಶಗಳಿಗೆ ರಫ್ತು ಮಾಡಬೇಕೆಂದೂ ಅದರಿಂದ ವಿದೇಶ ವಿನಿಮಯ ಸಂಪಾದನೆ ಆಗುವುದು ಮಾತ್ರವಲ್ಲದೆ ದೇಶದ ಸಂಪತ್ತು ಹೆಚ್ಚುವುದೆಂದು ತಿಳಿಸಿದರು

6 ಸಹಸ್ರ ಹಾವು ಹಿಡಿದವ

ಬೆಂಗಳೂರು 14 — ಹಿಂದೂಸ್ತಾನ ವಿಮಾನ ಕಾರ್ಖಾನೆಯು ಹಾವು ಹಿಡಿಯುವ ಶ್ರೀರಾಮುಲುವನ್ನು ಜೆಕೋಸ್ಲೋವಿಕಿಯಾ ವ್ಯಧಾನಿ ವಿಲಿಯಂ ಸಿಡೋಕಿಗೆ ಪರಿಚಯಮಾಡಿಕೊಡಲಾಗಿದೆ ತಾವು ಹಿಡಿದ ಹಾವುಗಳ ಭಾವಚಿತ್ರವನ್ನು ಅವರು ಸಿಡೋಕಿಗೆ ತೋರಿಸಿದರು ಶ್ರೀರಾಮುಲು ಇಲ್ಲಿಯವರೆಗೆ 6 ಸಹಸ್ರ ಹಾವುಗಳನ್ನು ಹಿಡಿದಿರುವರು.

ವಿಶ್ವ ಗಡಿಯಾರದ ವ್ಯವಸ್ಥೆ

ಪಾಗ್ಯೋತಿಪುರ 14 — ವಿದೇಶೀಯರ ಅನುಕೂಲಕ್ಕಾಗಿ ಇಲ್ಲಿಯ ಕಾಂಗ್ರೆಸಿನ ಅಧಿವೇಶನದಲ್ಲಿ ವಿಶ್ವ ಗಡಿಯಾರ ಇಡಲಾಗಿದೆ ಇದು ಪ್ರಪಂಚದ ನಾನಾ ಭಾಗಗಳಲ್ಲಿ ರಾತ್ರಿ ಹಗಲು ಗಳನ್ನು ತೋರಿಸುತ್ತದೆ ಈ ಗಡಿಯಾರ ಓವರ್‌ಸೀಸ್ ಕಮ್ಯೂನಿಕೇಷನ್ ಸರ್ವಿಸ್‌ನವರಿಗೆ ಸೇರಿದ್ದು

ನವ ದೆಹಲಿ 15 — ಸಾರ್ವಜನಿಕರ ಮನಸ್ಸಿನಲ್ಲಿ ಉಂಟಾಗಿರುವ ಯಾವುದೇ ಸಂಶಯಗಳು, ಮಂತ್ರಿಗಳನ್ನು ವಿಚಾರಣೆ ಮಾಡುವುದರಿಂದ ಸಾರ್ವಜನಿಕರಿಗೆ ತೃಪ್ತಿ ಆಗುವುದಾದರೆ ಮಂತ್ರಿಗಳ ಮೇಲಿನ ಆಕ್ಷೇಪಣೆಗಳನ್ನು ಪರಿಶೀಲಿಸಲು ಕ್ರಮಬದ್ಧವಾದ ವಿಚಾರಣೆ ಮಾಡುವಂತೆ ಕೇಂದ್ರ ಕಾಂಗ್ರೆಸು ಪಾರ್ಲಿಮೆಂಟರಿ ಸಮಿತಿ ಅಜ್ಞೆ ಮಾಡಿದೆ 1957 ನೆಯ ಸಾಲಿನ ಕಾಂಗ್ರೆಸು ಚಟುವಟಿಕೆಗಳ ಕುರಿತು ಮೂರು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಗಳು ಬರೆದಿರುವ ವಂದಿಯಲ್ಲಿ ತಿಳಿಸಲಾಗಿದೆ.

ಗೋವಾದಲ್ಲಿ ವಿಪರೀತ ತೆರಿಗೆ

ಬೆಳಗಾಂ 14 — ಗೋವಾದಲ್ಲಿ ವಿಪರೀತ ತೆರಿಗೆಯು ಹೊರಿಸಲ್ಪಡುತ್ತಿದೆ ಈ ವರ್ಷ ಹೆಚ್ಚು ತೆರಿಗೆಯಿಂದ ರೂ 16 ಲಕ್ಷ ತೆರಿಗೆ ಹೆಚ್ಚಿಸಿಕೊಳ್ಳಲಾಗಿದೆ.

ಹೊಂದಿಕೊಂಡಿರಬೇಕು

ಪಾಗ್ಯೋತಿಪುರ 14 — ಅಲ್ಪ ಮತ್ತು ಭಾರಿ ಕೈಗಾರಿಕೆಗಳು ಪಕ್ಕಪಕ್ಕದಲ್ಲಿ ಬೆಳೆಯಬೇಕೆಂದು ಪ್ರಧಾನಿ ನೆಹರು ಇಲ್ಲಿ ತಿಳಿಸಿದರು

—

ಎರ್ನಾಕುಲಂ 14 — ಕೇರಳವನ್ನು ಕಮ್ಯೂನಿಸಂನಿಂದ ರಕ್ಷಿಸಲು ಪಿಎಸ್ಪಿ ಕಾಂಗ್ರೆಸಿನೊಡನೆ ಸೇರಿ ಸಂಯುಕ್ತರಂಗ ಸ್ಥಾಪಿಸಲು ಸಿದ್ಧವಿರುವುದಾಗಿ ಪಿಎಸ್ಪಿ ಕೇರಳ ಸಮಿತಿಅಧ್ಯಕ್ಷ ಶ್ರೀ ಪಟ್ಟಂತಾನು ಪಿಳ್ಳೈ ತಿಳಿಸಿದರು

ನಾಳೆಯ ಪಂಚಾಂಗ

ಆ|| ಮಹಾವಿದ್ವಾನ್ ದೈವಜ್ಞ ಶಿಖಾಮಣಿ
ಸಂಪತ್ಕೃಷ್ಣ ಜೋಯಿಸರಿಂದ

17 ತ್ರಯೋದಶಿ ಜೇಷ್ಠ

ತುಟ್ಟಿ ಭತ್ಯ ಹೆಚ್ಚಿತು

ಬೊಂಬಾಯಿ 15 — ಈ ವರ್ಷ ಜನವರಿ 1 ನೇ ತಾ|| ನಿಂದ ದೇಶದ ಸುಮಾರು 60 ಸಾವಿರ ಬ್ಯಾಂಕು ನೌಕರರು ತಿಂಗಳೊಂದಕ್ಕೆ ರೂ 4 ರಿಂದ ರೂ 10 ರವರೆಗೆ ಹೆಚ್ಚು ತುಟ್ಟಿ ಭತ್ಯ ಪಡೆಯುವರು.

ಸುದ್ದಿಗಳು

ಕೊಲಂಬಸ್ 15 — ಶುಕ್ರವಾರ ರಷ್ಯದ ಮೊದಲನೆ ಉಪಗ್ರಹ ನೆಲಕ್ಕೆ ಬಿದ್ದು ಬೇರೆ ಬೇರೆ ಎಂಟು ಚೂರುಗಳು ಆದವೆಂದು ಓಹಿಯೋ ವಿಶ್ವವಿದ್ಯಾನಿಲಯದ ವಿಜ್ಞಾನಿಗಳು ತಿಳಿಸಿದರು.

ಂ ಂ

ಪಾಗ್ಯೋತಿಪುರ 15 — ಈ ಮಧ್ಯಾಹ್ನ ಸಮಾವೇಶವಾಗಿದ್ದ ಕಾಂಗ್ರೆಸು ಸ್ಟೀಯರಿಂಗು ಸಮಿತಿ ಸಭೆ ಘೋಷಣೆಯೊಂದನ್ನಿತ್ತು, ಅಖಿಲ ಭಾರತ ಉದ್ದೇಶಕ್ಕಾಗಿ ಅಧಿಕೃತ ಭಾಷೆ ಹಿಂದಿ, ಆದರೆ ಅಂಥ ಉದ್ದೇಶಗಳಿಗೆ ಹಿಂದಿಗೆ ಕ್ರಮವಾಗಿ ಬರಬೇಕು ಎಂದು ನಿರ್ಧರಿಸಿದೆ.

ಂ ಂ

ಕಟಕ್ 14 — ಪಾಕಿಸ್ತಾನ ಪ್ರಧಾನಿ ನೂರ್‌ರವರು ಹಿಂದೂಗಳ ವೇಲೆ ಹೊಂಡಿಸಿರುವ ಆಜ್ಞೆಯನ್ನು ವಾಪಸು ಪಡೆಯುವರೆಂಬ ಅಶಯವನ್ನು ರಕ್ಷಣಾ ಮಂತ್ರಿ ಶ್ರೀ ವಿ ಕೆ. ಕೃಷ್ಣಮೆನನ್ ವ್ಯಕ್ತಮಾಡಿದರು.

ಂ ಂ

ಹೈದರಾಬಾದ್ 14 — ಕುತುಬ್ ಷಾ ದಿನಾಚರಣೆಯ ಎಂಡನೆಯ ದಿನದ ಸಮಾರಂಭದಲ್ಲಿ ಆಂಧ್ರದ ಮುಖ್ಯ ಮಂತ್ರಿ ಶ್ರೀ ಎಸ್ ಸಂಜೀವರೆಡ್ಡಿಯವರು ಮಾತನಾಡುತ್ತಾ ರಾಜ್ಯದ ಮುಸ್ಲಿಮರು ತೆಲುಗು ಕಲಿಯಬೇಕೆಂದು ತಿಳಿಸಿದರು.

ತನ್ನನ್ನು ಹೊಂದಿದ್ದವರಿಗೆಲ್ಲಾ ದುರ್ದೆಶೆ ತಂದ ಭಾಗತದ ವಜ್ರದ ಕಥೆ

ಆಂಧ್ರದ ಕೃಷ್ಣಾ ಜಿಲ್ಲೆಯ ಪಾರ್ಟ್‌ಲಿನಿಂದ ಮಚಲೀಬಂದರಿಗೆ ಓಡಿ ಹೋಗಲು ಸಾಧಾರಣ ಮನುಷ್ಯನಿಗೂ ಪ್ರಯಾಸಕರವಾದುದೇ ಸರಿ : ಆದರೆ ತನ್ನ ತೊಡೆಯಲ್ಲಿ ದೊಡ್ಡ ಗಾಯಹೊಂದಿದ್ದ ಸೋಮುಗೆ ಇನ್ನೂ ಕಷ್ಟಕರವಾಗಿದ್ದಿತು ; ಅವನನ್ನು ನೋಡಿದವರೆಲ್ಲಾ ಅವನ ವಿಷಯದಲ್ಲಿ ಕನಿಕರಗೊಳ್ಳುತ್ತಿದ್ದರು.

ಪಾರ್ಟ್‌ಯಲ್ಲಿ ವಜ್ರದ ಗಣಿಯೊಳ್ಳೆಲಸಗಾರನಾಗಿದ್ದ ಸೋಮುವು ವಜ್ರದ ಗಣಿಯಿಂದ ದೂರದೂರ ಹೋದಷ್ಟೂ ಅವನಿಗೆ ಸಂತೋಷ ಹೆಚ್ಚುತ್ತಿದ್ದಿತು.

ವಜ್ರದ ಗಣಿಯಲ್ಲಿ ಗುಲಾಮನಾಗಿದ್ದ ಇವನು, ಎಂದೊದಿಗೂ ಈ ಕಷ್ಟ ಮತ್ತು ಸಂಕಟಗಳಿಂದ ಬಿಡುಗಡೆ ಹೊಂದಲು ಅವನು ಈ ಸಾಹಸ ಮಾಡಿದನು.

ಆ ಕಾಲದಲ್ಲಿ ಮಚಲೀಬಂದರು ಒಂದು ಚಟುವಟಿಕೆಯಾದ ಬಂದರಾಗಿದ್ದಿತು ; ಹಿಂದಿನ ಗುಲಾಮನಾದ ಸೋಮುವು ಪ್ರಯತ್ನಿಸಿ, ಅಲ್ಲಿಯ ಒಂದು ಹಡಗಿನ ಕ್ಯಾಪ್ಟನ್ನನ್ನು ಕಂಡನು.

ಸೋಮುವು ಅವನನ್ನು ಕುರಿತು— ನಿಮ್ಮ ಹಡಗಿನಲ್ಲಿ ಸ್ವಲ್ಪ ಸ್ಥಳ ಕೊಡಿ ನಾನು ಈ ಸಹಾಯಕ್ಕಾಗಿ ನಿಮಗೆ ಅಮೂಲ್ಯ ಪದಾರ್ಥವೊಂದನ್ನು ಕೊಡುವೆನು, ಎಂದನು.

ಅಮೂಲ್ಯ ಪದಾರ್ಥ ! ಎಂದು ಪ್ರತಿಧ್ವನಿಸಿದನು ಕ್ಯಾಪ್ಟನ್.

ಹೌದು, ಒಂದು ಜೀವಿತ ಕಾಲದಲ್ಲಿ ಶೇಖರಿಸುವುದಕ್ಕಿಂತ ಹೆಚ್ಚು ಅಮೂಲ್ಯವಾದುದು ; ನಾನು ಪ್ರಖ್ಯಾತ ಪಾರ್ಟ್‌ಯಲ್ ವಜ್ರಗಣಿಯಿಂದ ಬಂದಿದ್ದೇನೆನ್ನುವುದು ನಿಮಗೆ ಗೊತ್ತಿರಬಹುದು, ಎಂದನು ಸೋಮು.

ಕ್ಯಾಪ್ಟನ್ನನು ಕೂಗಿಕೊಂಡಿತು ; ಸೋಮು ಕ್ಯಾಪ್ಟನ್ನಿನ ಹಡಗಿನಲ್ಲಿ ಪ್ರವೇಶಿಸಿದ ಮೇಲೆ ಕ್ಯಾಪ್ಟನ್ನನ್ನು ಸೋಮು ತಿಳಿಸಿದ ಮಾತು ಕೆರಳಿಸಿತು : ನರಳುತ್ತಿರುವ ಗಾಯದ ಮೇಲೆ ಏನೊಂದೂ ಇಲ್ಲದೆ ಕೇವಲ ಒಂದು ಸೊಂಟದ ಒಟ್ಟೆಯೊಂದು ಮಾತ್ರ ನಗ್ನನಾಗಿದ್ದನು, ಮತ್ತು ಒಂದು ದೊಡ್ಡ ಗಾಯಕ್ಕೆ ಬದಲು ತ್ತಿದ್ದ ಚಿಂದಿಗಳು ಮಾತ್ರ ಇದ್ದವು.

ತನ್ನ ಸಂರಕ್ಷಣೆಗಾಗಿ ಆ ಗುಲಾಮನು ಏನನ್ನು ಕೊಡುವನೆಂಬುದನ್ನು ಅರಿಯಲು ಅತುರದಿಂದ ಕ್ಯಾಪ್ಟನ್ನನು ಸೋಮುವನ್ನು ಕುರಿತು— ಎಲ್ಲಯ್ಯಾ, ನಿನ್ನ ಅಮೂಲ್ಯ ಬಹುಮಾನ, ಎಂದನು.

ಒಂದು ನಿಮಿಷ ತಾಳೀ ಸಾರ್ ! ಎಂದು ಹೇಳುತ್ತಾ, ಸೋಮು ತನ್ನ ಗಾಯಕ್ಕೆ ಕಟ್ಟಿದ್ದ ಕರಕು ಬಟ್ಟೆಗಳನ್ನು ತೆಗೆದನು ; ನಂತರ ಗಾಯದ ಎಡಬದಿಯ ಚರ್ಮವನ್ನು ಹಿಗ್ಗಲಿಸಿ, ತನ್ನ ಕೊಳೆಯು ಕಯ್ಯನ್ನು ಒಳಮಾಡಿದ್ದ ಗಾಯದ ಒಳಕ್ಕೆ ಹಾಕಿ, ಅಲ್ಲಿಂದ ಕಲ್ಲಿನಂತಿದ್ದ ಚಿಕ್ಕಮಯವಾಗಿದ್ದ ಒಂದು ಪದಾರ್ಥವನ್ನು ತೆಗೆದು, ಕ್ಯಾಪ್ಟನ್ನಿನ ಕೈಗೆ ಕೊಟ್ಟನು.

ಇದನ್ನು ನೋಡಿದ ಕ್ಯಾಪ್ಟನ್ನಿಗೆ ಉಂಟಾದ ಕೋಪವನ್ನು ಸೋಮುವು ಅರಿತು, ಅದನ್ನು ಚೆನ್ನಾಗಿ ತೊಳೀರೀ ಸಾರ್, ಆಮೇಲೆ ಗೊತ್ತಾಗುತ್ತದೆ ಎಂದನು

ಕ್ಯಾಪ್ಟನ್ನನು ಹೊರಕ್ಕೆ ಹೋಗಿ, ಅದನ್ನು ಚಿಕ್ಕಕಲಿ ಮತ್ತು ಕೊಳೆ ಇಲ್ಲದಂತೆ ಚೆನ್ನಾಗಿ ತೊಳೆದನು : ಅದು ಹೊಳೆಯುತ್ತಿದ್ದ ವಜ್ರವಾಗಿದ್ದು ಅದರ ಹೊಳಪು ತನ್ನ ಕಣ್ಣುಗಳನ್ನು ಮಂಕುಮಾಡುವಷ್ಟಾದ್ದಾಗಿದ್ದುದು ಕ್ಯಾಪ್ಟನ್ನಿಗೆ ಕಂಡಿತು.

[ನಾಳೇ ಸಂಚಿಕೆ ನೋಡಿ

ವುಡ್‌ಲ್ಯಾಂಡ್ಸ್

10–1–58 ರಿಂದ

ದೇವಾನಂದ್ — ಕಲ್ಪನಾ ಕಾರ್ತಿಕ್

ಶಶಿಕಲಾ ನಾಟ್ಯವಹಿಸಿರುವ

ನೌ ದೊ ಗ್ಯಾರ

Nau Do Gyara

ಅತ್ಯಮೋಘ ಹಿಂದಿ ಚಿತ್ರ

ದಿನವಹಿ 3 ಪ್ರದರ್ಶನಗಳು

ಉಮಾ ಟಾಕೀಸ್

ಅಮೋಘ 2 ನೇ ವಾರ

ಗುಣಸುಂದರಿ

(ತಮಿಳು)

ನಟವರ್ಗ– ಸಾವಿತ್ರಿ, ಜಮುನಾ ಗಣೇಶ್ ನಂಬಿಯಾರ್, ಅಂಗಂಮಾವ್, ಕರುಣಾನಿಧಿ

[ಪ್ರತಿದಿನ 3 ಆಟಗಳು]

ಪ್ರತಿ ಶುಕ್ರವಾರ, ಶನಿವಾರ, ಭಾನುವಾರ ಬೆಳಿಗಿನ ಪ್ರದರ್ಶನ 10–30 ಕ್ಕೆ

Protect the cow

ಗೋ ಸಂರಕ್ಷಣೆ ಮಾಡಿ

ಅಪೆರಾ—

ವೈಭವ 4 ನೇ ವಾರ

ಮಾಯಾಬಜಾರ್

ಎನ್. ಟಿ. ರಾಮರಾವ್, ಸಾವಿತ್ರಿ, ರಂಗರಾವ್, ನಾಗೇಶ್ವರರಾವ್, ಲೀಲಾಂಗಿ

ಅಭಿನಯಿಸಿರುವ ಮನಮೋಹಕ ಕನ್ನಡ ಚಿತ್ರ

ಪ್ರತಿ ದಿನ 3 ಆಟಗಳು

ಕ್ಷಯ ನಿರೋಧಕ ಬಿ ಸಿ ಜಿ ದಾಕು

ಹಾಕುತ್ತಿರುವುದು

Edited, Printed& Published by Dharma Prabhara Narala M S Krishna Rao at the Satyavadi Press Chamarajpura Mysore